<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

**ಸಿ.ಸಿ. ಸಂಖ್ಯೆ: 69/2024**

**ಸಾಕ್ಷಿಯನ್ನು ದಿಃ 17.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಮಹೇಶ ಆರ್ | ಸಿಡಬ್ಲ್ಯೂಃ 09 | ಪಿಡಬ್ಲ್ಯೂಃ 09 |
| ತಂದೆಯ ಹೆಸರು | ಲೇಟ್ ಎಂ ಎಸ್ ರಾಜಶೇಖರ್ | | |
| ವಯಸ್ಸು | 54 ವರ್ಷ | | |
| ಕೆಲಸ | ಎ.ಎಸ್.ಐ. ಕೆ ಆರ್ ನಗರ ಠಾಣೆ . | | |
| ವಾಸಸ್ಥಳ | ಮೈಸೂರು. | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ನಾನು 18.01.2021 ರಿಂದ 15.06.2025ವರೆಗೆ ಹುಣಸೂರು ಪಟ್ಟಣ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 21.11.2023 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ 6.30 ಕ್ಕೆ ಚಾಸಾ-1 ರವರು ಠಾಣೆಗೆ ಹಾಜರಾಗಿ ನನ್ನ ಮುಂದೆ ನೀಡಿದ್ದ ದೂರನ್ನು ಸ್ವೀಕರಿಸಿ ಅದರ ಆಧಾರದ ಮೇಲೆ ಠಾಣಾ ಮೊಕದ್ದಮೆ ಸಂಖ್ಯೆ237/2023 ರಲ್ಲಿ ಪ್ರಕರಣ ದಾಖಲಿಸಿ ಪ್ರ.ವ.ವ. ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನೀವೇದಿಸಿಕೊಂಡಿರುತ್ತೇನೆ. ನಾನು ಸ್ವೀಕರಿಸಿದ ದೂರು ನಿಪಿ-1 ರಲ್ಲಿದ್ದು , ಸಾಕ್ಷಿಯ ಸಹಿಯನ್ನು ನಿಪಿ-1 ಬಿ ಎಂದು , ಪ್ರ.ವ.ವ. ವರದಿಯನ್ನು ನಿಪಿ-4 ಎಂದು , ಸಾಕ್ಷಿಯ ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. ದಿನಾಂಕಃ 22.11.2023 ರಂದು ಘಟನಾ ಸ್ಥಳಕ್ಕೆ ಭೇಟಿ ಕೊಟ್ಟು ಚಾಸಾ-1 ರವರು ಹಾಜರಿದ್ದು ಸ್ಥಳ ತೋರಿಸಿದ ಮೇರೆಗೆ ಪಂಚರಾದ ಚಾಸಾ-2 ಮತ್ತು 3ರವರು ಹಾಜರಿದ್ದು ಅವರಿಗೆ ನೋಟೀಸು ಜಾರಿ ಗೊಳಿಸಿ ಅವರ ಸಮಕ್ಷಮ ಮಧ್ಯಾಹ್ನ 2 ರಿಂದ 3 ಗಂಟೆಯವರೆಗೆ ಸ್ಥಳ ಮಹಜರು ಜರುಗಿಸಿರುತ್ತೇನೆ. ಪಂಚರಿಗೆ ನೀಡಿದ ನೋಟೀಸನ್ನು ಈಗ ನೋಡುತ್ತಿದ್ದು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು, ನಿಪಿ-2 ರ ಮಹಜರಿನಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-2 ಡಿ ಎಂದು ಗುರುತಿಸಲಾಯಿತು. ನಂತರ ಠಾಣೆಗೆ ವಾಪಸ್ಸಾಗಿ ಪ್ರತ್ಯಕ್ಷ

ಸಾಕ್ಷಿದಾರರಾದ ಚಾಸಾ-4 ರಿಂದ 8 ರವರಿಗೆ ನೋಟೀಸು ಜಾರಿ ಮಾಡಿ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ. ದಿನಾಂಕಃ 22.11.2023 ರಂದು ಚಾಸಾ-1 ರರಿಂದ ಅವರ ಜಮೀನಿಗೆ ಸಂಬಂಧಿಸಿದ 2 ಪಹಣಿಗಳನ್ನು ಸ್ವೀಕರಿಸಿರುತ್ತೆನೆ. ಅದನ್ನು ಈಗ ನೋಡುತ್ತಿದ್ದು ನಿಪಿ-6 ಮತ್ತು 7 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-6 (ಎ) ಮತ್ತು 7 (ಎ) ಎಂದು ಗುರುತಿಸಲಾಯಿತು. ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಬಂದು ನನ್ನ ಮುಂದೆಹಾಜರಾದ ಮೇರೆಗೆ ವಿಚಾರಣೆಗೆ ಒಳಪಡಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಅವರನ್ನು ನೋಡಿದರೆ ಗುರುತಿಸುತ್ತೇನೆ ಸಾಕ್ಷಿ ನ್ಯಾಯಾಲಯದ ಮುಂದಿರುವ 1 ರಿಂದ 4 , 6 ಮತ್ತು 7ನೇ ಆರೋಪಿತರನ್ನು ನೋಡಿ ಗುರುತಿಸಿದ್ದು , 5 ಮತ್ತು 8ನೇ ಆರೋಪಿತರು ಗೈರು ಹಾಜರಾಗಿದ್ದು ವಿನಾಯಿತಿ ಅರ್ಜಿಯನ್ನು ಸಲ್ಲಿಸಿ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ನುಡಿದ ಕಾರಣ ವಿನಾಯಿತಿ ಅರ್ಜಿಯನ್ನು ಅಂಗೀಕರಿಸಲಾಗಿದೆ. ಈ ಹಂತದಲ್ಲಿ ತನಿಖೆ ಪೂರ್ಣ ಗೊಂಡ ಕಾರಣ ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಆರ್ ಕೆ ಎಸ್ ವಕೀಲರಿಂದಃ**

ದೂರು ಸ್ವೀಕರಿಸಿದ ತಕ್ಷಣ ಪ್ರಕರಣ ದಾಖಲಿಸುವ ಪೂರ್ವದಲ್ಲಿ ಸ್ಥಳಕ್ಕೆ ಹೋಗಿದ್ದೀರಾ ಎಂದರೆ ಆ ದಿನ ನಾನು ಠಾಣಾಧಿಕಾರಿಯ ಕರ್ತವ್ಯ ನಿರ್ವಹಿಸುತ್ತಿದ್ದು ಸಂಜೆ ಆಗಿದ್ದರಿಂದ ಸ್ಥಳಕ್ಕೆ ಹೋಗಿಲ್ಲ. ದೂರು ಕೊಡುವ ಸಮಯದಲ್ಲಿ ಸದರಿ ಜಮೀನಿನ ಸ್ವಾಧೀನದಲ್ಲಿ ಯಾರಿದ್ದರು ಎಂದು ತಿಳಿದುಕೊಂಡಿದ್ದೆ. ಆ ಸಮಯದಲ್ಲಿ ಚಾಸಾ-1ರವರು ಜಮೀನಿನ ಸ್ವಾಧೀನದಲ್ಲಿ ಇದ್ದರು. ಚಾಸಾ-1 ರವರು ಪಹಣಿ ತೋರಿಸಿದ ಆಧಾರದಲ್ಲಿ ಅವರು ಸ್ವಾಧೀನ ಇದ್ದರು ಎಂದು ಹೇಳುತ್ತಿದ್ದೇನೆ. ಪಹಣಿಯನ್ನು ಹೊರತು ಪಡಿಸಿ ಬೇರೆ ದಾಖಲೆ ಪರೀಶೀಲಿಸಿಲ್ಲ. ಚಾಸಾ-1 ರವರು ಸ್ವಾಧೀನದ ಬಗ್ಗೆ ಫೋಟೋ ಸಿಡಿ ಹಾಜರುಪಡಿಸಿಲ್ಲ. ಟ್ರಾಕ್ಟರ್ ಸಂಖ್ಯೆ ಮತ್ತು ಯಾವ ಕಂಪೆನಿ ಎಂದು ತನಿಖೆ ಮಾಡಿಲ್ಲ. ಟ್ರಾಕ್ಟರ್ ಚಾಲಕರ ಡಿಎಲ್ ಪಡೆದುಕೊಂಡಿಲ್ಲ. ಸ್ಥಳಕ್ಕೆ ಹೋದಾಗ ಎಷ್ಟು ಜಮೀನು ಉಳುಮೆ ಮಾಡಲಾಗಿತ್ತು ಎಂದರೆ ನಾನು ಮರುದಿನ ಹೋಗಿದ್ದರಿಂದ ಜನರು ಓಡಾಡಿದ ಕಾರಣ ಆ ಬಗ್ಗೆ ಹೇಳಲಾಗುವುದಿಲ್ಲ. ಯಾವ ಲೈನ್ ನಲ್ಲಿ ಉಳುಮೆ ಮಾಡಲಾಗಿತ್ತು ಎಂದು

ಹೇಳಲಾಗುವುದಿಲ್ಲ. ಪಂಚರಿಗೆ ನೋಟೀಸು ಕೊಟ್ಟ ಬಗ್ಗೆ ಮಹಜರಿನಲ್ಲಿ ಹೇಳಿದ್ದೇನೆ. ಸಾಮಾನ್ಯವಾಗಿ ಯಾವುದಾದರೂ ಜಮೀನನ್ನು ಉಳುಮೆ ಮಾಡಿದರೆ ಮಳೆ ಬೀಳದೇ ಇದ್ದರೆ ಮರುದಿನ ಉಳುಮೆ ಮಾಡಿದ ಜಾಗ ತಾಜಾವಾಗಿರುತ್ತದೆ ಎಂದರೆ ಇರಬಹುದು. ಆಗ ಹಳೇ ಉಳುಮೆ ಮತ್ತು ಹೊಸದಾಗಿ ಮಾಡಿದ ಉಳುಮೆ ಬಗ್ಗೆ ಗೊತ್ತಾಗುತ್ತದೆ ಎಂದರೆ ಸರಿ. ಮಹಜರಿನಲ್ಲಿ ಉಳುಮೆ ಮಾಡಿ ಓಡಾಡಿರುವ ಕಾರಣ ಕಂಡು ಬರುತ್ತಿಲ್ಲ ಎಂದು ಹೇಳಿದ್ದೇನೆ. ಸ್ವಾಧಿನದ ಬಗ್ಗೆ ಅಕ್ಕಪಕ್ಕದ ಜಮೀನಿನವರನ್ನು ಕೇಳಿದ್ದೇನೆ. ಅವರ ಹೇಳಿಕೆಯನ್ನು ದಾಖಲಿಸಿಕೊಂಡಿಲ್ಲ. ಜಮೀನಿನ ಮೂಲ ಮಾಲೀಕರು ಯಾರೆಂದು ತಿಳಿದುಕೊಂಡಿಲ್ಲ. ಚಾಸಾ–4 ರಿಂದ 8 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರ ಸಿವಿಲ್ ಪ್ರಕರಣಕ್ಕೆ ಅನುಕೂಲವಾಗಲೀ ಎಂದು ಅವರೊಂದಿಗೆ ಶಾಮೀಲ್ ಆಗಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಆರೋಪಿತರು ತಮ್ಮ ಪೂರ್ವಜರ ಕಾಲದಿಂದಲೂ ಸ್ವಾಧೀನದಲ್ಲಿ ಇದ್ದಾರೆ ಎಂದು ನನಗೆ ಗೊತ್ತಿದ್ದರೂ ಸಹ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸ್ವಾಧೀನ ಯಾರಿದ್ದಾರೆಂದು ಗೊತ್ತಾಗುತ್ತದೆ ಎಂಬ ಕಾರಣಕ್ಕಾಗಿ ಅಕ್ಕ ಪಕ್ಕದ ಜಮೀನಿನವರ ಹೇಳಿಕೆಯನ್ನು ದಾಖಲಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.